ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 69-73
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬಿ.ಎಲ್. ವೇಣು ಅವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ

**ಬಿ. ಆರ್. ಅಶ್ವಿನಿ[1] ಮತ್ತು ಡಾ. ವಿಜಯಕುಮಾರ್ ಹೆಚ್. ಜಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

**Abstract:**
*ಮನುಷ್ಯ ಅದೆಷ್ಟೇ ವೈಯಕ್ತಿಕ ಜೀವನ ನಡೆಸಿದರೂ ಸಮಾಜದಿಂದ ಹೊರಗೆ ಉಳಿಯಲು ಸಾಧ್ಯವಿಲ್ಲ. ವ್ಯಕಿ ಯಾವಾಗಲೂ 'ಸಮಾಜದ ಕೂಸು'. ಮನುಷ್ಯನಿಗೆ ಸಮಾಜವೇ ಬದುಕಿನ ಪಾಠಶಾಲೆ. ಸಮಾಜದಲ್ಲಿ ದೊರೆತ ಪ್ರತಿ ಅನುಭವದ ಪಾಠವನ್ನೇ ದಾಖಲಿಸಿ ಬರೆಹದ ರೂಪದಲ್ಲಿ ಬರೆದಿರುವ ಕಾರ್ಯವನ್ನು ಸಾಹಿತ್ಯ ಎಂದು ಕರೆಯಲಾಗುತ್ತದೆ. ಬದುಕಿನ ಒಂದೊಂದು ಅನುಭವವನ್ನು ಪದಗಳಲ್ಲಿ ಕೂಡಿಡುವ ವ್ಯಕ್ತಿಯೇ 'ಸಾಹಿತಿ'ಯಾಗುತ್ತಾನೆ. ಇಂತಹ ಪರಿಸರದ ಕೂಸಾದ ಸಾಹಿತಿ ಆಯಾ ಕಾಲದ ಅವಶ್ಯಕತೆ ಹಾಗೂ ಅನಿವಾರ್ಯತೆ ಅಗತ್ಯತೆಗಳಿಗೆ ಅನುಗುಣವಾಗಿ ಸ್ಪಂದಿಸುವವನಾಗಿರುತ್ತಾನೆ. ಇಂತಹ ಪ್ರಜ್ಞಾವಂತನನ್ನ ಸಮಾಜವೇ ಕಾಲಕ್ಕೆ ತಕ್ಕಂತೆ ದುಡಿಸಿಕೊಳ್ಳುತ್ತದೆ. ಹಾಗೆಯೇ ಸಾಹಿತಿ ಕೂಡ ಜವಾಬ್ದಾರಿಯುತ ಸ್ಥಾನದಲ್ಲಿದ್ದು ತನ್ನ ಸುತ್ತಮುತ್ತಲಿನ ಸಮಾಜದ ಧೋರಣೆಗಳಿಗೆ ತನ್ನನ್ನು ತಾನು ಅರ್ಪಿಸಿಕೊಂಡು ಒಬ್ಬ ಜವಾಬ್ಧಾರಿಯುತ ವ್ಯಕ್ತಿಯಾಗಿ ತನ್ನ ಬದುಕಿನ ಗತಅನುಭವಗಳನ್ನು, ಭವಿಷ್ಯದ ಭವಿಷ್ಯವನ್ನು, ಆಶಾಕಿರಣಗಳನ್ನ ತನ್ನ ಸಮಾಜದ ಬಗೆಗಿರುವ ಆಲೋಚನೆಗಳನ್ನ ಪ್ರತಿ ಬರೆಹದಲ್ಲಿ ಇಡಿದಿಡುವಕಾರ್ಯವನ್ನು ನಡೆಸುತ್ತಾನೆ. ಇಂಥ ಪ್ರಜ್ಞಾವಂತ ವ್ಯಕ್ತಿಗಳ ಪಟ್ಟಿಯಲ್ಲಿ ನಮ್ಮಕನ್ನಡ ಸಾಹಿತ್ಯ ಲೋಕದ ಅನೇಕ ಪಂಡಿತ ಪಾಮರರು ಕಾಣಸಿಗುತ್ತಾರೆ ಅಂತಹ ಪ್ರತಿಭಾವಂತ ಸಾಹಿತಿಯಾಗಿ ಚಿತ್ರದುರ್ಗದ ಇತಿಹಾಸಕಾರ ಕಾದಂಬರಿಕಾರದ 'ಬಿ.ಎಲ್. ವೇಣು' ಒಬ್ಬರಾಗಿದ್ದಾರೆ. ಸಾಮಾಜಿಕ ಪ್ರಕ್ರಿಯೆಯನ್ನು ಮೈಗೂಡಿಸಿಕೊಂಡ ಬಿ ಎಲ್ ವೇಣು ಅವರ ಕಾದಂಬರಿಗಳಲ್ಲಿ ಬಹು ಮುಖ್ಯವಾದ ನೆಲೆಯಾಗಿ 'ಸ್ತ್ರೀವಾದಿ ಗುಣ' ಕಂಡು ಬರುತ್ತದೆ. ತಮ್ಮ ಬಹುತೇಕ ಕಾದಂಬರಿಗಳಲ್ಲಿ ಹೆಣ್ಣನ್ನು ಜೀವಪರ ನೆಲೆಯಾಗಿ, ಪ್ರತಿಭಟನೆಯ ಶಕ್ತಿಯಾಗಿ ಚಿತ್ರಿಸುವಲ್ಲಿ ಇವರು ಸಿದ್ಧ ಹಸ್ತರಾಗಿದ್ದಾರೆ. ಇಲ್ಲಿ ಅದೆಷ್ಟು ಸ್ತ್ರೀ ಪಾತ್ರಗಳು ಪುರುಷ ಪಾತ್ರದ ಸರಿ ಸಮಾನವಾಗಿ ನಿಲ್ಲುತ್ತವೆ. ಸಾಮಾಜಿಕ ಹಾಗೂ ಆರ್ಥಿಕ ಪರಾವಲಂಬಿತನದಲ್ಲಿ ಗಟ್ಟಿತನವನ್ನು ತೋರುತ್ತವೆ.*

**Keywords:** *ಕನ್ನಡ ಸಾಹಿತ್ಯ, ಕನ್ನಡ ಕಾದಂಬರಿ, ಬಿ.ಎಲ್. ವೇಣು, ಸ್ತ್ರೀ ಪಾತ್ರ ಚಿತ್ರಣ.*

## ಪೀಠಿಕೆ

ಬಿ.ಎಲ್.ವೇಣು ಅವರ ಅರ್ಥಪೂರ್ಣವಾದ ಮಹತ್ವವಾದ ಪ್ರಾದೇಶಿಕ ಸಾಮಾಜಿಕ ಕಾದಂಬರಿ '*ಮೊಬ್ಬಳ್ಳಿಯೋರ ಬೆತ್ತಲೆ ಸೇವೆ*' ಸಾಮಾಜಿಕ ಅನ್ಯಾಯಗಳ ಬಗ್ಗೆ ಧ್ವನಿಸುತ್ತದೆ. ಸಾಮಾಜಿಕವಾಗಿ ಸಂಕಷ್ಟಗಳಿಗೆ ಸಿಲುಕಿದವರ ಬಗ್ಗೆ ಅನುಕಂಪ, ಸಹಾನುಭೂತಿ ಸ್ತ್ರೀ ಬದುಕಿನ ಬಹುಮುಖ

**Please cite this article as:** ಅಶ್ವಿನಿ ಬಿ. ಆರ್. ಮತ್ತು ವಿಜಯಕುಮಾರ್ ಹೆಚ್. ಜಿ. (2024). ಬಿ.ಎಲ್. ವೇಣು ಅವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 69–73

ಆಯಾಮುಗಳನ್ನು ಅತ್ಯಂತ ಅಂತಃಕರಣದಿಂದ ಹಾಗೂ ಆತ್ಮೀಯ ನೋಟದಿಂದ ವಿಮರ್ಶಿಸಿರುವುದು ಕಂಡು ಬರುತ್ತದೆ. ಅಸಹಾಯಕತೆ, ಅಸಮಾನತೆಯನ್ನೇ ಧರ್ಮವೆಂದು, ಅಂಧಾಚರಣೆಗಳು ನೀತಿ ನಿಯಮಗಳು ಕೇವಲ ಕೆಳವರ್ಗದ ಹೆಣ್ಣಿಗೆ ಮಾತ್ರವೇ ಎಂಬ ನೀತಿಯನ್ನು ಸೃಷ್ಟಿಸಿ, ಹೆಣ್ಣಿನ ಒಳ ಮನಸ್ಸನ್ನು ಅರಿಯದೆ ಸಾಂಪ್ರದಾಯದ ಬಿಗಿ ಮುಷ್ಟಿಯಲ್ಲಿಡಿದು ಹೆಣ್ಣಿನ ಬದುಕನ್ನು ಗಂಡು ತನಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳಲು ಹೊರಟ ಕಥೆಯಾಗಿದೆ. ಈ ಕಾದಂಬರಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ರಾಜಕೀಯ ಕುತಂತ್ರಗಳು ಜಾತಿಯ ಹೆಸರಲ್ಲಿ ನಡೆಯುವ ಶೋಷಣೆಗಳು, ಅದರೊಟ್ಟಿಗೆ ಜಮೀನ್ದಾರಿ ವ್ಯವಸ್ಥೆಯ ಗೌರವವನ್ನು ಬಿ.ಎಲ್.ವೇಣು ಅವರು ಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸಿದ್ದಾರೆ. ಹಲವು ಕಡೆ ಬಿ.ಎಲ್.ವೇಣು ಅವರು ಮಾರ್ಕ್ಸ್‌ವಾದಿಯಾಗಿಯೂ ಕಂಡುಬರುವುದುಂಟು. ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವನ್ನು, ವರ್ಗ ಪರಿಕಲ್ಪನೆಯನ್ನು ಶ್ರೀಮಂತ–ಬಡವರ, ಬಂಡವಾಳಶಾಹಿಗಳ ಶ್ರಮಿಕರ ನಡುವೆ ಸದಾ ಕಾಲ ನಡೆಯುವ ಸಂಘರ್ಷಣೆಯನ್ನು ಇಲ್ಲಿ ವಿವರಿಸಿದ್ದಾರೆ. ವೇಣು ಅವರ ಬಹುತೇಕ ಕಾದಂಬರಿಗಳಲ್ಲಿ ಬರುವ ಜಮೀನ್ದಾರಿ ಮತ್ತು ಅಧಿಕಾರಶಾಹಿ ವರ್ಗದ ವರ್ತನೆಗಳು ಕೆಳವರ್ಗದವರ ಅದರಲ್ಲಿಯೂ ಕೆಳವರ್ಗದ ಹೆಣ್ಣಿನ ಮೇಲೆ ಅನೇಕ ರೀತಿಯಲ್ಲಿ  ವರ್ಗಬಲ, ಜಾತಿ ಬಲದ ಆಧಾರದ ಮೇಲೆ  ಒಳಪಡಿಸುತ್ತಾರೆ. ಇಲ್ಲಿ ಎಲ್ಲಾ ಕಥೆಗಾರರು, ಕಾದಂಬರಿಕಾರರು, ಅಸಹಾಯಕ ದುರ್ಬಲ ಹೆಣ್ಣಿನ ಸ್ವಭಾವವನ್ನ ವರ್ಣಿಸುವ ರೀತಿಯಲ್ಲಿಯೇ ವೇಣುಕೂಡ ಬಹುಮುಖವಾಗಿಯೇ ಕಟ್ಟಿಕೊಟ್ಟಿದ್ದಾರೆ. ಮೇಲ್ವರ್ಗದವರ ಸ್ವಭಾವಗಳು ಶೋಷಿಸುವ ಗುಣವನ್ನೇ ವರ್ಣಿಸಿದ್ದಾರೆ. ಇದು ವೇಣು ಅವರ ಬರಹದ ಮಿತಿಯು ಆಗಿದೆ. ಇವರ ಬಹುತೇಕ ಐತಿಹಾಸಿಕ ಕಾದಂಬರಿಗಳಲ್ಲಿ ಚಿತ್ರತವಾಗಿರುವ ಶೌರ್ಯ, ಪರಾಕ್ರಮ, ಹಿಂಸೆಯ ಜೊತೆಗೆ ಮಾನವ ಸಂಬಂಧಗಳಿಗೆ ಪಡೆಯುವ ಭಾವೈಕ್ಯತೆಯನ್ನ ಮುಖ್ಯವಾಗಿ ಸೂಚಿಸುತ್ತದೆ. ಇದರ ಜೊತೆ ಜೊತೆಗೆ ಒಳಗೆ ಹೂತಿರುವ ಸಾಂಪ್ರದಾಯಿಕ ಮೂಢನಂಬಿಕೆ ಸಾಮಾನ್ಯ ಸ್ತ್ರೀಯರ ಮೇಲೆ ಗಂಡಿನಕ್ರೌರ್ಯ, ಬದುಕಿನ ದ್ವಂದ್ವಗಳನ್ನ ಉಪೇಕ್ಷಿತ ಜನಾಂಗದ ಸಂಕಟಗಳನ್ನ ಅಲ್ಲಲ್ಲಿ ತಾಜಾ ಉದಾಹರಣೆಗಳ ಮೂಲಕ ಅಭಿವ್ಯಕ್ತಿಪಡಿಸಿದ್ದಾರೆ. ಪ್ರಜಾಪ್ರಭುತ್ವದೊಳಗೆ ಇರುವ ಕೆಲವು ಸೌಕರ್ಯಗಳನ್ನು ಕಾನೂನಿನ ಅಡಿಯಲ್ಲಿ ಪ್ರತಿಯೊಂದು ಚರಾಚರ ವಿಷಯ ವಸ್ತು ಪ್ರಕೃತಿ ಸಹಜ ಬದಲಾವಣೆಗೆ ನಿರಂತರವಾಗಿ ಒಳಗಾಗುತ್ತಲೇ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತದೆ.

ಸ್ತ್ರೀವಾದ ಎನ್ನುವುದು ಒಂದು ಸಾಮಾಜಿಕ ರಾಜಕೀಯ ಸಿದ್ಧಾಂತ ಇದು ಸ್ತ್ರೀ ಪುರುಷರ ನಡುವಿನ ಲಿಂಗಧಾರಿತ ತಾರತಮ್ಯಗಳ ವ್ಯವಸ್ಥೆಯನ್ನ ಬದಲಾಯಿಸಲು ಹಕ್ಕೋತ್ತಾಯಿಸುತ್ತದೆ ಹಾಗೂ ಸಾಮಾಜಿಕ ರಾಜಕೀಯ ಆರ್ಥಿಕ ಮೊದಲಾದ ಬದುಕಿನ ನೆಲೆಗಳಲ್ಲಿ ಸ್ತ್ರೀ ಪುರುಷನ ಸಮವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೇ ಇದರ ಮುಖ್ಯಕಾರ್ಯ ವಿಧಾನವಾಗಿದೆ. ಸ್ತ್ರೀವಾದ ಪಾಶ್ಚಿಮಾತ್ಯರಿಂದ ಭಾರತಕ್ಕೆ ಆಮದಾಗಿ ಬಂದಿರುವ ಅನೇಕ ವಿಚಾರಧಾರೆಗಳ ಸಾಲಿಗೆ ಸೇರುತ್ತದೆ. ಇದರ ಪ್ರಾಥಮಿಕ ಗುರಿ ಕೇವಲ ಬೌದ್ಧಿಕ ಚಿಂತನ ಸೂತ್ರಾವಸ್ಥೆ ಆಗಿರದೆ ಇದು ವರ್ತಮಾನದ ಜನಜೀವನಕ್ರಮವನ್ನು ರೂಪಿಸುವಂತ ಸಂಸ್ಕೃತಿಯ ಸ್ವರೂಪವನ್ನು ಪರಿಶೀಲನೆಗೆ ಗುರಿ ಮಾಡುತ್ತ ಜನರಲ್ಲಿ ಪ್ರಜ್ಞ ಜಾಗೃತಿಗಾಗಿ ಪ್ರಯತ್ನಿಸುತ್ತದೆ. ಇಂಥ ಪ್ರಜ್ಞ ಜಾಗೃತಿಯ ಹರಿಕಾರರಾಗಿ ಬಿ.ಎಲ್.ವೇಣು ಕಂಡುಬರುತ್ತಾರೆ.

ಸ್ತ್ರೀವಾದ ಎಂಬುದು ಒಂದು ಪ್ರಯೋಗ ಪ್ರಕ್ರಿಯೆಯಾಗಿದೆ ಎಂಬ ಅಂಶವನ್ನು ಬಿ.ಎಲ್.ವೇಣು ಅವರ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳಲ್ಲಿ ಸಂದರ್ಭಗಳಸಹಿತ

ವಿವರಿಸಿರುವುದನ್ನ ಮನಗಾಣಬಹುದು. ಪಾಶ್ಚಿಮಾತ್ಯದಲ್ಲಿ ಸ್ತ್ರೀವಾದವು ಹುಟ್ಟಿರುವುದರ ಹಿಂದೆ ಸುದೀರ್ಘವಾದ ಹೋರಾಟದ ಚರಿತ್ರೆಯುಂಟು. ಯುರೋಪ್ ಖಂಡ, ಜರ್ಮನಿ, ನೆದರ್‌ಲ್ಯಾಂಡ್, ಫ್ರಾನ್ಸ್, ಇಟಲಿ ಮೊದಲಾದ ಅನೇಕ ದೇಶಗಳಲ್ಲಿ ಮತ್ತು ಇಟಲಿ ಹಾಗೂ ಉತ್ತರ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಆಯಾ ದೇಶದ ಸಾಂಸ್ಕೃತಿಕ ಹಿನ್ನೆಲೆಗೆ ಅನುಸಾರವಾಗಿ ಸ್ತ್ರೀಯರ ಸ್ಥಾನಮಾನ, ಸ್ತ್ರೀಯರೇ ಹೋರಾಟ ಮಾಡುತ್ತಾ ಬಂದಿರುವ ಚರಿತ್ರೆ ಸುಮಾರು 200 ವರ್ಷಗಳಷ್ಟು ಸುದೀರ್ಘವಾದದ್ದು. ಆದರೆ ಅರವತ್ತು–ಎಪ್ಪತ್ತರ ದಶಕದಲ್ಲಿ ವ್ಯಾಪಕವಾದ ಮಹಿಳಾ ಚಳುವಳಿಗಳು ನಡೆದವು. ಪಶ್ಚಿಮದ ಸ್ತ್ರೀಯರ ಈ ಸಂಘಟಿತ ಹೋರಾಟಗಳು ಅಂತಿಮವಾಗಿ ಸ್ತ್ರೀಯರ ಬಿಡುಗಡೆಯ ಗುರಿಯನ್ನು ಹೊಂದಿದ್ದರಿಂದ ಅರವತ್ತು–ಎಪ್ಪತ್ತರ ದಶಕಗಳ ಹೋರಾಟವನ್ನು ಮಹಿಳಾ ವಿಮೋಚನಾ ಚಳುವಳಿ ಎಂದು ಗುರುತಿಸಲಾಗುತ್ತದೆ. ಇಂತಹ ಮಹಿಳಾಪರ ಧ್ವನಿಯಾಗಿ ಬಿ.ಎಲ್. ವೇಣು ಕಂಡುಬರುತ್ತಾರೆ.

ವೇಣು ಅವರು ತಮ್ಮ ಸ್ತ್ರೀ ಪರ ಧ್ವನಿಯಲ್ಲಿ ಹೀಗೆ ಹೇಳುವುದುಂಟು, 'ಸ್ತ್ರೀಯರು ಪುರುಷನಿಂದ ದೈಹಿಕ ಹಿಂಸೆಗೆ ಒಳಗಾಗುವುದು ಮತ್ತು ಪುರುಷನಿಂದ ಮಾನಸಿಕ ಹಿಂಸೆಗೆ ಗುರಿಯಾಗುವುದು' ಎಂಬ ಎರಡು ಬಗೆಯ ಹಿಂಸೆಗೆ ಸ್ತ್ರೀಯರು ಒಳಗಾಗುತ್ತಾರೆ. ಎಂಬುದನ್ನು ತಮ್ಮ ಅನೇಕ ಕಾದಂಬರಿಗಳಲ್ಲಿ ವಿಶ್ಲೇಷಿಸಿದ್ದಾರೆ.

'*ಮೊಬ್ಬಳ್ಳಿಯೋರ ಬೆತ್ತಲೆ ಸೇವೆ*' ಕಾದಂಬರಿಯಲ್ಲಿ ಊರಗೌಡ ಪೂಜಾರ್ಯ ಕುತಂತ್ರದಿಂದ ಹೆಣ್ಣಿನ ಬೆತ್ತಲೆ ಸೇವೆ ಎಂಬ ಸಂಪ್ರದಾಯ ಆರಂಭವಾಗಿ ಅದು ಮುಂದೆ ಸಂಘರ್ಷದ ಹಾದಿ ಹಿಡಿಯುತ್ತ ಸಾಗುವ ಕಾದಂಬರಿ. ಬೆತ್ತಲೆ ಸೇವೆ ಎಂಬುದು ಕೇವಲ ಕೆಳಜಾತಿಯ ಸ್ತ್ರೀಯರಿಗೆ ಮಾತ್ರವೇ ಎಂಬ ಕಾನೂನು, ಈ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಮೇಲ್ವರ್ಗದ ಪುರುಷ ಮಾಡಿರುವುದು ಸಂಘರ್ಷಕ್ಕೆ ಕಾರಣವಾಗುತ್ತದೆ. ದಮಯಂತಿ ಕಾಫಿಕ್ಲಬ್ ಎಂಬ ಹೋಟೆಲ್ ಕೆಳಜಾತಿಯ ಗಂಡಸರಿಗೆ ನಿಷೇಧಿಸಿತ್ತು. ಆದರೆ ಅದೇ ಕೆಳಜಾತಿಯ ಹೆಣ್ಣು ಮಕ್ಕಳಿಗೆ ತಮ್ಮ ಮನೆ ಹೋಟೆಲ್ಗಳಲ್ಲಿ ಕೆಲಸ ಮಾಡಿಸಿಕೊಳ್ಳುವ ನೆಪದಲ್ಲಿ ಅವರನ್ನು ಒಳಗೆ ಬಿಟ್ಟುಕೊಂಡು ತಮ್ಮ ಮನೆಯ ಕೆಲಸದ ಜೊತೆಗೆ ಅವರ ಆಸೆಯನು ಈಡೇರಿಸಿಕೊಳ್ಳುವ ಒಳ ಸಂಚು ನಡೆಯುತ್ತದೆ. ಮೊಬ್ಬಳ್ಳಿ ಹಾಗೂ ಆ ಊರ ಸುತ್ತಮುತ್ತಲ ಹಳ್ಳಿಗಳ ಜನರಿಗೆ ಗೌಡರು ತಮ್ಮ ಸ್ವಾರ್ಥಕ್ಕಾಗಿ ಸಾಲ ನೀಡಿ ಅದರ ವಸೂಲಿ ನೆಪದಲ್ಲಿ ಅಸಹಾಯಕ ಹೆಣ್ಣು ಮಕ್ಕಳ ಮೇಲೆ ತಮ್ಮ ಕಾಮದೃಷ್ಟಿ ಬೀರುತ್ತಿದ್ದರು. ಸಾಂಪ್ರದಾಯಸ್ಥ ಕುಟುಂಬದಿಂದ ಬಂದಂತ 'ಮೆಟ್ಟಿಲುಗಳು' ಕಾದಂಬರಿಯ 'ದಿವ್ಯ' ಮತ್ತು 'ಮಹಾನದಿ' ಕಾದಂಬರಿಯ ಗಾಯತ್ರಿ ಎಂಬ ಸ್ತ್ರೀ ಪಾತ್ರಗಳು ಶಿಕ್ಷಣ ಕಲಿತ ಮಹಿಳೆಯರಾಗಿದ್ದಾರೆ. ಜೊತೆಗೆ ವೈಚಾರಿಕ ಮನೋಭಾವನೆಯನ್ನು ಬೆಳೆಸಿಕೊಂಡವರು ಇದೇ ಇವರ ಜೀವನದಲ್ಲಿ ಪಲ್ಲಟಗೊಳಿಸುವ ಮತ್ತು ಸಮಸ್ಯೆಗಳಿಗೆ ಸಿಲುಕುವ ಸನ್ನಿವೇಶಕ್ಕೆ ಸಾಕ್ಷಿಯಾಗುತ್ತದೆ.

ದಿವ್ಯ ಸಾಂಪ್ರದಾಯದ ವಿರೋಧಿಯಾಗಿ ಕೆಳಜಾತಿಯ ಹುಡುಗನನ್ನು ಪ್ರೀತಿಸಿದ್ದು ಇದು ಹೆಣ್ಣಿಗೆ ತಾನು ಬಯಸಿದ ಬಾಳ ಸಂಗಾತಿಯನ್ನು ಪಡೆಯಲು ಸ್ವತಂತ್ರವಿಲ್ಲ ಎಂಬುದನ್ನು 21ನೇ ಶತಮಾನದ ಈ ದಿನದಲ್ಲಿಯೂ .. ಅದುಎಷ್ಟೇ ಆಧುನಿಕತೆಯನ್ನು ಮೈಗೂಡಿಸಿಕೊಂಡ ಪೋಷಕರಾಗಿದ್ದರು ಕೂಡ ತಮ್ಮ ಮಗನ ಮದುವೆ ಸಂದರ್ಭದಲ್ಲಿ ಮಗನಿಗೆ ತನ್ನ ಬಾಳ ಸಂಗಾತಿಯ ಆಯ್ಕೆಗೆ ನೀಡುವ ಸ್ವತಂತ್ರವನ್ನು ಅದೇ ತಮ್ಮ ಹೆಣ್ಣು ಮಗಳಿಗೆ ನೀಡಲಾರರು ಎಂಬುದು ವಿಷಾಧನೀಯ ಸಂಗತಿ. ಮಹಾನದಿ ಕಾದಂಬರಿಯ ಗಾಯತ್ರಿ ಪಾತ್ರವೂ ಕೂಡ ಇಂತಹದ್ದೇ ನೋವನ್ನು ಅನುಭವಿಸಿ, ಆ ನಂತರ ಎಲ್ಲರ ಮನಸ್ಸನ್ನು ಗೆಲ್ಲುವಲ್ಲಿ ಸಫಲವಾಗುತ್ತಾಳೆ. ಪ್ರೀತಿ, ಸಹನೆ, ಜಾಣ್ಮೆ ಎಲ್ಲವನ್ನೂ ಇಲ್ಲಿ ಕಾಣಬಹುದಾಗಿದೆ. ಹಾಗೆ

'ಕುಣಿಯಿತು ಹೆಜ್ಜೆ ನಡೆಯಿತು ಗೆಜ್ಜೆ' ಎಂಬ ಕಾದಂಬರಿಯ 'ಕಲ್ಯಾಣಿ' ಪಾತ್ರ, 'ಹೃದಯರಾಗ' ಕಾದಂಬರಿಯ 'ಶಾರದೆ' ಪಾತ್ರ ಮೌಲ್ಯಗಳಿಗೆ ಎದುರಾಗಿ ಪರಂಪರಾಗತವಾಗಿ ಬಂದ ಕಲೆಯನ್ನು ಸ್ಥಿತ್ಯಂತರಗೊಳಿಸುತ್ತಾರೆ. 'ಪ್ರೇಮ ಪರ್ವ' ಕಾದಂಬರಿಯ ಮಲತಾಯಿ ಧೋರಣೆಯಿಂದ 'ಸರಸ್ವತಿ' ಎಂಬ ಪಾತ್ರ ಜೀವನವಿಡಿ ನೋವಿನಲ್ಲಿ ಇರಬೇಕಾಗುತ್ತದೆ. ಕೊನೆಗೆ ಯಾರೊಬ್ಬರ ಬದುಕು ಸುಖ ಕಾಣುವುದಿಲ್ಲ. 'ಕೆಂಡ ಸಂಪಿಗೆ' ಕಾದಂಬರಿಯಲ್ಲಿ ಒಂದು ಹೆಣ್ಣಿನಿಂದ ಮತ್ತೊಂದು ಹೆಣ್ಣಿಗೆ ಆಗುವ ಶೋಷಣೆಯನ್ನು ಮಾರ್ಮಿಕವಾಗಿ ಬಿ.ಎಲ್. ವೇಣು ಅವರು ಚಿತ್ರಿಸಿರುವುದನ್ನು ಕಾಣಬಹುದು. ಸ್ತ್ರೀ ಪುರುಷ ಇಬ್ಬರನ್ನು ಎಚ್ಚರಿಸುವ ಕೃತಿ ಇದಾಗಿದೆ.

ಪುರುಷನ ಬದುಕಿಗೆ ಕಾಮ ಒಂದೇ ಆಹಾರವಲ್ಲ. ಹೆಣ್ಣುಗಳು ಕೇವಲ ಭೋಗದ ವಸ್ತುಗಳಲ್ಲ. ಹೆಣ್ಣಿಗೂ ಅವಳದ್ದೇ ಆದ ಸ್ವತಂತ್ರ ಆಸೆ ಆಕಾಂಕ್ಷೆಗಳಿವೆ ಎಂಬ ಸಂದೇಶವನ್ನು ಈ ಕಾದಂಬರಿಯಲ್ಲಿ ಮನಗಾಣಬಹುದು. ರಾಷ್ಟ್ರೀಯ ಭಾವೈಕ್ಯತೆ ಪ್ರಶಸ್ತಿ ಪಡೆದ ಕಾದಂಬರಿ 'ಕಲ್ಲರಳಿ ಹೂವಾಗಿ' ಇದು ಹಿಂದೂ ಮುಸ್ಲಿಂ ಧರ್ಮಗಳ ನಡುವಿನ ಸಾಮರಸ್ಯ ಬಿಂಬಿತವಾದದ್ದು. ಪ್ರೀತಿ ಪ್ರೇಮ ಪ್ರಣಯ ವಸ್ತುಗಳನ್ನೊಳಗೊಂಡಂತಹ ಕಾದಂಬರಿ ಇದಾಗಿದೆ. ಶತ್ರು ಹೈದರಾಲಿ ಪಡೆಯ ಸೇನಾಪತಿ ತನ್ನ ಪತ್ನಿಯೊಂದಿಗೆ ರಣಕಣದಲ್ಲಿ ಸತ್ತು ಬಿದ್ದಾಗ ಆತನ ಮಗಳು ಹಸೀನಾ ಚೂರಿ ಇರಿತದಿಂದ ಪ್ರಾಣ ಬಿಡುವ ಸ್ಥಿತಿಯಲ್ಲಿದ್ದಳು ಆಗ ಅರಮನೆಯ ವೈದ್ಯನಾಗಿದ್ದ ಬಸಯ್ಯನ ಮಗ ವೀರಣ್ಣ. ಹಸೀನಾಳನ್ನು ತನ್ನ ಮನೆಗೆ ಕರೆತಂದು ಪ್ರಾಣಾಪಾಯದಿಂದ ಕಾಪಾಡುತ್ತಾನೆ. ಇಲ್ಲಿ ಧರ್ಮಕ್ಕಿಂತ ಜೀವನ ಪ್ರೀತಿ ಮುಖ್ಯ ಎಂದು ಸಾಬೀತು ಮಾಡಲಾಗಿದೆ. ಮಾಸ್ತಿ ಪ್ರಶಸ್ತಿ ದೊರೆತ ಕಾದಂಬರಿ 'ಓಬಳವ್ವ ನಾಗತಿ' ದುರ್ಗದ ಪಾಳೇಗಾರ ಪರಂಪರೆಯಲ್ಲಿ 'ಮಹಾ ಮಾತೃಶ್ರೀ' ಎಂದು ಕರೆಸಿಕೊಳ್ಳುವ ಹಿರೇ ಮದಕರಿ ಕಸ್ತೂರಿ ರಂಗಪ್ಪನಾಯಕನ ಮಡದಿ ಓಬಳವ್ವ ನಾಗತಿ ತನ್ನ ಪತಿಯ ಮರಣದ ನಂತರ ದುರ್ಗದ ದೊರೆ ಯಾರು ಎನ್ನುವ ಪ್ರಶ್ನೆಗೆ ತನ್ನ ಚಾಣಾಕ್ಷತನದಿಂದ ಉತ್ತರ ನೀಡಿದವಳು. ಇವಳು ಜಾಣ್ಮೆ, ಯುದ್ಧ ಕಲೆ, ಮಹಾ ತಂತ್ರಗಾರಿಕೆಗೆ, ತಾಳ್ಮೆಗೆ ಹೆಸರಾದವಳು ಹಾಗೂ ಪ್ರೌಢಿಮೆಯನ್ನು ಮೈಗೂಡಿಸಿಕೊಂಡ ಹೆಣ್ಣು.

ಇತಿಹಾಸಕಾರರು ಓಬಳವ್ವ ನಾಗತಿಯನ್ನು 'ಗಂಡು ಓಬಳೇ' ಎಂದು ಕರೆದರೆ, ಕಾದಂಬರಿಕಾರರಾದ ಬಿ.ಎಲ್. ವೇಣು ಅವರು ಆ ಕಾಲದ 'ಇಂದಿರಾಗಾಂಧಿ' ಎಂದು ಕರೆಯುತ್ತಾರೆ. ಪತಿಯ ಅಣ್ಣನ ಮಗನಾದ ದೊಡ್ಡ ಮದಕರಿಯನ್ನು ದತ್ತು ಪಡೆದು, ಅವನನ್ನು ಪೌಜು ದೊರೆಯಾಗಿ ಮಾಡಿ, ನಾಡಿನ ಹಿತಕ್ಕಾಗಿ ಕೆರೆಗೆ ಹಾರವಾದ ಚಿಕ್ಕಸಿದ್ದವ್ವ ನಾಗತಿಯ ಮಗನನ್ನು ಕರೆತಂದು ಅವನಿಗೆ ದುರ್ಗದ ಪಟ್ಟವನ್ನ ಕಟ್ಟುವ ತಂತ್ರ, ಸ್ವತಃ ತಾನೇ ಶತ್ರು ಸೈನ್ಯದ ಮೇಲೆ ಯುದ್ಧ ಮಾಡಿ ಗೆದ್ದು ದುರ್ಗವನ್ನ ಕಾಪಾಡಿದವಳು, ಇಂತಹ ಓಬಳವ್ವ, ಪುರುಷ ಸಮಾಜದ ಕೆಂಗಣ್ಣಿಗೆ ಬಿದ್ದು ರಾಣಿಯಾಗಿದ್ದರೂ ಜಂಪಣ್ಣ ನಾಯಕರಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗುವುದು ಪುರುಷ ಸಮಾಜ ಅವಳನ್ನು ಸಾಮಾನ್ಯ ಸ್ತ್ರೀ ಆಗಿ ಮಾಡುತ್ತದೆ. ಸುರಪುರದ ವೆಂಕಟಪ್ಪ ನಾಯಕ 'ಕಾದಂಬರಿಯ ರಾಣಿ' ಈರಮ್ಮ 'ಬ್ರಿಟಿಷ್ ಅಧಿಕಾರಿ ಒಬ್ಬನ ವಿರುದ್ಧ ಹೋರಾಡಿ ವೀರ ಮರಣ ಹೊಂದಿದ ವೀರ ಮಾತೆಯಾಗಿದ್ದಾಳೆ. ಹೀಗೆ ಬಿ.ಎಲ್.ವೇಣು ಅವರ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳಲ್ಲಿ ಸ್ತ್ರೀವಾದಿ ಮನೋಧೋರಣೆಯ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಇಂತಹ ಸ್ತ್ರೀ ಪಾತ್ರಗಳು ಪ್ರಸ್ತುತ ಸಮಾಜಕ್ಕೆ ಅನುಕರಣೆಯವಾದವು ಎಂಬ ಸಂದೇಶ ಸಾರಿದ್ದಾರೆ.

**ಆಧಾರ ಗ್ರಂಥಗಳು**


- ಮಲ್ಲಿಕಾಘಂಟಿ. (2020). *ನಮ್ಮ ಕಣ್ಣಲ್ಲಿ ನೀವು.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ನೇಮಿಚಂದ್ರ. (1984). *ಮಹಿಳಾ ಅಧ್ಯಯನ.* ಮಂಗಳ ಭಾರತಿ ಪ್ರಕಾಶನ.
- ಶಂಕರಪ್ಪ, ಆರ್. (2020). *ಮಹಿಳಾ ಸಬಲೀಕರಣ.* ಅನುಜನ ಪ್ರಕಾಶನ.
- ವೇಣು, ಬಿ.ಎಲ್. (2023). *ರಾಜಸುರಪುರದ ವೆಂಕಟಪ್ಪ ನಾಯಕ.* ಗೀತಾಂಜಲಿ ಪುಸ್ತಕ ಪ್ರಕಾಶನ.
- ವೇಣು, ಬಿ.ಎಲ್. (2023). *ಸಮರ್ಥರು.* ಗೀತಾಂಜಲಿ ಪುಸ್ತಕ ಪ್ರಕಾಶನ.
- ವೇಣು, ಬಿ.ಎಲ್. (2020). *ರಾಜಮಾತೆ ಓಬಳವ್ವನಾಗತಿ.* ಗೀತಾಂಜಲಿ ಪುಸ್ತಕ ಪ್ರಕಾಶನ.
- ವೇಣು, ಬಿ.ಎಲ್. (2018). *ಗಂಡುಗಲಿ ಮದಕರಿ ನಾಯಕ.* ಗೀತಾಂಜಲಿ ಪುಸ್ತಕ ಪ್ರಕಾಶನ.
- ವೇಣು, ಬಿ.ಎಲ್. (1981). *ಮೊಬ್ಬಳ್ಳಿಯೋರ ಬೆತ್ತಲೆ ಸೇವೆ.* ಪಾಂಚಜನ್ಯ ಪಬ್ಲಿಕೇಷನ್ಸ್.